

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11–03–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬೂಬಕರ್(ರ) ಖಲೀಫರಾದ ನಂತರ ಅವರಿಗೆ ಎದುರಿಸಬೇಕಾಗಿ ಬಂದ ಕಷ್ಟತೆಗಳ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಅವುಗಳಲ್ಲಿ ಪ್ರಸ್ತಾಪಿಸಲಾದ ಮೊದಲ ಕಷ್ಟತೆ ಎಂಬುದು ಹಝ್ರತ್ ಪೈಗಂಬರ್(ಸ)ರ ನಿಧನದ ದುಃಖವಾಗಿತ್ತು. ಇದು ಎಲ್ಲ ಸಹಾಬಿಯರು ದುಃಖದ ತೀವ್ರತೆಯಿಂದ ಹುಚ್ಚರಂತೆ ಆಗಿದ್ದ ಮೊದಲ ನಾಜೂಕಾದ ಮತ್ತು ಭಯಾನಕವಾದ ಹಂತವಾಗಿತ್ತು. 'ಯಾರಾದರೂ ಮುಹಮ್ಮದ್(ಸ) ನಿಧನರಾದರು ಎಂದು ಹೇಳಿದರೆ ಅವರ ತಲೆಯನ್ನು ಕಡಿಯುವೆನು' ಎಂದು ಹೇಳುತ್ತಾ ಹಝ್ರತ್ ಉಮರ್(ರ) ಖಡ್ಗವೆತ್ತಿ ನಿಂತಿದ್ದರು. ಆ ಸಮಯದಲ್ಲಿ ಹಝ್ರತ್ ಅಬೂಬಕರ್(ರ) ಹೇಳಿದರು: ಯಾರು ಮುಹಮ್ಮದ್ ರಸೂಲುಲ್ಲಾಹ್(ಸ)ರನ್ನು ಆರಾಧಿಸುತ್ತಾರೋ ಅವರು ಕೇಳಿರಿ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೃತಪಟ್ಟಿರುವರು. ಯಾರು ಅಲ್ಲಾಹನ ಆರಾಧನೆ ಮಾಡುತ್ತಾರೋ ಅವರು ಸಂತೋಷಗೊಳ್ಳಿರಿ. ಏಕೆಂದರೆ, ಅಲ್ಲಾಹನು ಜೀವಂತನಾಗಿರುವನು. ಅವನು ಎಂದಿಗೂ ಮೃತಪಡಲಾರನು.

ಹಝ್ರತ್ ಅಬೂಬಕರ್(ರ)ಗೆ ಹಝ್ರತ್ ಪೈಗಂಬರ್(ಸ) ರೊಡನೆ ಅಪರಿಮಿತವಾದ ಪ್ರೀತಿಯಿದ್ದರೂ ಅವರು ಏಕದೇವತ್ವದ ಪಾಠವನ್ನೇ ನೀಡಿದರು. ಪರಿಪೂರ್ಣ ಧೈರ್ಯ ಮತ್ತು ಯುಕ್ತಿಯಿಂದ ಸಹಾಬಿಯರನ್ನು ಅವರು ಸಮಾಧಾನಿಸಿದರು ಮತ್ತು ದುಃಖದಲ್ಲಿದ್ದ ಪ್ರೇಮಿಗಳ ಹೃದಯಗಳಿಗೆ ಶಮನ ನೀಡುತ್ತಿದ್ದರು. ಮತ್ತೊಂದೆಡೆ ಅವರು ಏಕದೇವತ್ವದ ಅಲುಗಾಡುತ್ತಿದ್ದ ಕಟ್ಟಡವನ್ನು ಸರಿಪಡಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಒಂದು ಸಾರ್ವಜನಿಕ ಸಭೆಯಲ್ಲಿ, ಪವಿತ್ರ ಖುರ್‌ಆನಿನ ವಚನದ ಆಧಾರದಲ್ಲಿ, ಹಝ್ರತ್ ಪೈಗಂಬರ್(ಸ)ರ ಜೀವಿತದ ಬಗ್ಗೆ ಕೆಲವು ಸಹಾಬಿಯರ ಹೃದಯದಲ್ಲಿ ಉಂಟಾಗಿದ್ದ ಎಲ್ಲ ತಪ್ಪು ಭಾವನೆಗಳನ್ನು ದೂರಮಾಡಿದರು.

ಖಿಲಾಫತಿನ ಚುನಾವಣೆಯ ವೇಳೆ ಮುಸ್ಲಿಂ ಸಮುದಾಯವನ್ನು ಒಗ್ಗಟ್ಟು ಮತ್ತು ಐಕ್ಯದ ದಾರದಲ್ಲಿ ಪೋಣಿಸುವುದಾಗಿತ್ತು ಹಝ್ರತ್ ಅಬೂಬಕರ್(ರ) ಮಾಡಿದ ಎರಡನೇ ದೊಡ್ಡ ಕೆಲಸ. ಹಝ್ರತ್ ಪೈಗಂಬರ್(ಸ)ರ ಮರಣದಿಂದ ಉಂಟಾದ ಮತ್ತೊಂದು ದೊಡ್ಡ ಆತಂಕವೆಂಬುದು ಸಖೀಫ ಬನೂ ಸಾಇದದಲ್ಲಿ ಅನ್ಸಾರರ ಸಭೆಯಾಗಿತ್ತು. ಅನ್ಸಾರರು ಯಾವುದೇ ರೀತಿಯಲ್ಲೂ ಮುಹಾಜಿರರಿಂದ ಒಬ್ಬ ಖಲೀಫರನ್ನು ಅಂಗೀಕರಿಸಲು ತಯಾರಾಗಿರಲಿಲ್ಲ. ಇಂತಹ ನಿರ್ಣಾಯಕ ಸಂದರ್ಭದಲ್ಲಿ ಅಲ್ಲಾಹನು ಹಝ್ರತ್ ಅಬೂಬಕರ್(ರ)ರ ನಾಲಗೆಯಲ್ಲಿ ಎಂತಹ ಪ್ರಭಾವ ಉಂಟುಮಾಡಿದನು ಎಂದರೆ ಒಡಕು ಮತ್ತು ಭಿನ್ನಾಭಿಪ್ರಾಯವು ಪ್ರೀತಿ ಹಾಗೂ ಐಕ್ಯವಾಗಿ ಬದಲಾಯಿತು.

ಹಝ್ರತ್ ಅಬೂಬಕರ್(ರ) ಬೇಗನೇ ನಿಭಾಯಿಸಿದ ಮೂರನೇ ಕೆಲಸವು ಉಸಾಮರ ಸೈನ್ಯವನ್ನು ಕಳುಹಿಸುವುದರ ಕಾರ್ಯವಾಗಿತ್ತು. ಈ ಸೈನ್ಯವನ್ನು ಸಿರಿಯದ ಗಡಿಯಲ್ಲಿ ರೋಮನರ ವಿರುದ್ಧ ಹೋರಾಡಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ತಯಾರು ಮಾಡಿದ್ದರು. ಈ ಸೈನ್ಯದ ನೇತೃತ್ವವನ್ನು ಹಝ್ರತ್ ಉಸಾಮರಿಗೆ ಒಪ್ಪಿಸಿಕೊಟ್ಟು ಹಝ್ರತ್ ಪೈಗಂಬರ್(ಸ) ಹಝ್ರತ್ ಉಸಾಮರಿಗೆ ವಿಶದವಾದ ನಿರ್ದೇಶನಗಳನ್ನು ಕೂಡ ನೀಡಿದ್ದರು. ಅದಲ್ಲದೇ ಹಝ್ರತ್ ಪೈಗಂಬರ್(ಸ) ತನ್ನ ಅನುಗ್ರಹೀತ ಕೈಗಳಿಂದ ಒಂದು ಧ್ವಜವನ್ನು ಸಹ ಕಟ್ಟಿದ್ದರು. ಈ ಸೈನ್ಯದಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಸಮೇತ ಶ್ರೇಷ್ಠ ಸಹಾಬಿಯರನ್ನು ಕೂಡ ಸೇರ್ಪಡೆ ಮಾಡಲಾಗಿತ್ತು. ಒಬ್ಬ ಹುಡುಗನನ್ನು ಮುಹಾಜಿರರ ಶ್ರೇಷ್ಠ ಸಹಾಬಿಯರ ನೇತಾರನನ್ನಾಗಿ ನೇಮಿಸಲಾಗಿರುವುದರ ಕುರಿತು ಕೆಲವು ಜನರು ಮಾತು ಎತ್ತಿದಾಗ ಹಝ್ರತ್ ಪೈಗಂಬರ್(ಸ) ಅಸಂತುಷ್ಟಿಯನ್ನು ತೋರಿಸಿದ್ದರು. ಹಝ್ರತ್ ಉಸಾಮ(ರ) ಸೈನ್ಯದೊಂದಿಗೆ ಹೊರಡುವ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಕೊನೆಯ ರೋಗಾವಸ್ಥೆಯಲ್ಲಿ ಇದ್ದರು. ಹಝ್ರತ್ ಪೈಗಂಬರ್(ಸ) ನಿಧನರಾದಾಗ ಈ ಸೈನ್ಯವು ಜುರ್ಫ್ ಅಥವಾ ಧೀಖಶಬ್ ಎಂಬ ಪ್ರದೇಶದಿಂದ ಮದೀನಕ್ಕೆ ಮರಳಿ ಬಂತು. ಹಝ್ರತ್ ಅಬೂಬಕರ್(ರ)ರ ಕೈಯಲ್ಲಿ ಬೈಅತ್ ಮಾಡಲಾದಾಗ ಅವರು ಹೀಗೆ ಆದೇಶ ನೀಡಿದರು: ಉಸಾಮರ ಸೈನ್ಯ ತನ್ನ ಕೆಲಸವನ್ನು ಪೂರ್ತಿಗೊಳಿಸುವುದು. ಉಸಾಮರ ಸೈನ್ಯದಿಂದ ಯಾವನೇ ವ್ಯಕ್ತಿ ಹಿಂದಕ್ಕೆ ಸರಿದು ಮದೀನದಲ್ಲಿ ಉಳಿಯಬಾರದು. ಅದು ಮೂರು ಸಾವಿರದ ಸೈನ್ಯವಾಗಿತ್ತು ಎಂದು ಹೇಳಲಾಗುತ್ತದೆ. ಮತ್ತೊಂದು ವರದಿಯಲ್ಲಿ ಅದರ ಸಂಖ್ಯೆ ಏಳು ನೂರು ಎಂದೂ ಪ್ರಸ್ತಾಪಿಸಲಾಗಿದೆ. ಹಝ್ರತ್ ಪೈಗಂಬರ್(ಸ) ನಿಧನರಾದಾಗ ಅರೇಬಿಯದ ಗೋತ್ರಗಳಲ್ಲಿ ಧರ್ಮತ್ಯಾಗದ ಪಿತೂರಿ ಹರಡುತ್ತಿತ್ತು. ಅದೇ ವೇಳೆ ಯಹೂದಿಯರು ಮತ್ತು ಕ್ರೈಸ್ತರು ಕೂಡ ತಲೆ ಎತ್ತಿಯೆತ್ತಿ ನೋಡುತ್ತಿದ್ದರು. ಇಂತಹ ಅವಸ್ಥೆಯಲ್ಲಿ ಈ ಸೈನ್ಯದ ಹೊರಡುವಿಕೆಯನ್ನು ತಡೆದು ನಿಲ್ಲಿಸಲು ಹಝ್ರತ್ ಅಬೂಬಕರ್(ರ)ರಿಗೆ ಸಲಹೆ ನೀಡಲಾಯಿತು. ಆಗ ಹಝ್ರತ್ ಅಬೂಬಕರ್(ರ) ಅಲ್ಲಾಹನ ಮೇಲೆ ಪ್ರಮಾಣ ಮಾಡಿ ಹೇಳಿದರು: ವನ್ಯಮೃಗಗಳು ನನ್ನನ್ನು ಸುಲಿದು ತಿನ್ನುವುದಾಗಿ ನನಗೆ ಖಚಿತವಿದ್ದರೂ ಹಝ್ರತ್ ಪೈಗಂಬರ್(ಸ) ಉಸಾಮರ ಸೈನ್ಯದ ಕುರಿತು ಜಾರಿಗೊಳಿಸಿದ ತೀರ್ಮಾನವನ್ನು ನಾನು ಕಾರ್ಯಗತಗೊಳಿಸುವೆನು.

ಉಸಾಮರ ಸೈನ್ಯದ ರವಾನೆಯ ಹಿನ್ನೆಲೆಯಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಹೀಗೆ ನುಡಿದರು: ಯಾವ ಸೈನ್ಯವನ್ನು ರವಾನೆ

ಮಾಡಿಸಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದ್ದರೋ ಅದನ್ನು ತಡೆಯುವ ಕೆಲಸವನ್ನು, ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅಬೂಖಹಾಫನ ಮಗನು ಮಾಡಬೇಕೆಂದು ನೀವು ಬಯಸುತ್ತೀರಾ? ಅಲ್ಲಾಹನಾಣೆ, ಶತ್ರುಗಳ ಸೈನ್ಯಗಳು ಮದೀನಕ್ಕೆ ನುಗ್ಗಿ, ನಾಯಿಗಳು ಮಹಿಳೆಯರ ಶವಗಳನ್ನು ಎಳೆಯುತ್ತಾ ಸುತ್ತಿದರೂ ಕೂಡ ನಾನು ಈ ಸೈನ್ಯವನ್ನು ತಡೆಯುವುದಿಲ್ಲ. ಈ ಧೈರ್ಯ ಮತ್ತು ಶೌರ್ಯ ಹಝ್ರತ್ ಅಬೂಬಕರ್(ರ)ರಲ್ಲಿ ಉಂಟಾಗಲು ಕಾರಣವೇನೆಂದು **"ಮುಹಮ್ಮದುರ್ರಸೂಲುಲ್ಲಾಹಿ ವಲ್ಲಧೀನ ಮಅಹೂ ಅಶಿದ್ದಾಉ ಅಲಲ್ ಕುಫ್ಫಾರಿ** ಎಂಬ ವಚನದಲ್ಲಿ ಅಲ್ಲಾಹನು ಹೇಳಿದ್ದಾನೆ. (ಅರ್ಥ: ಮುಹಮ್ಮದ್ ಅಲ್ಲಾಹನ ಸಂದೇಶವಾಹಕ. ಅವರೊಂದಿಗಿರುವವರು ಅವಿಶ್ವಾಸಿಗಳ ವಿರುದ್ಧ ಕಠಿಣರಾಗಿದ್ದಾರೆ.) ವಿದ್ಯುತ್ತಿನ ತಂತಿಯ ಜೊತೆ ಮಾಮೂಲಿ ತಂತಿ ಸೇರಿದರೆ, ಆ ಮಾಮೂಲಿ ತಂತಿಯಲ್ಲಿ ಸಹ ಮಹತ್ತಾದ ಶಕ್ತಿ ಉಂಟಾಗುವ ಹಾಗೆಯೇ ಹಝ್ರತ್ ಪೈಗಂಬರ್(ಸ)ರ ಜೊತೆ ಸಂಬಂಧದ ಕಾರಣದಿಂದ ಹಝ್ರತ್ ಪೈಗಂಬರ್(ಸ)ರನ್ನು ನಂಬುವವರು ಸಹ ಅವಿಶ್ವಾಸಿಗಳ ವಿರುದ್ಧ ಕಠಿಣರಾಗುವಂತೆ ಆದರು.

ಉಸಾಮರ ಸೈನ್ಯದ ರವಾನೆಯ ಕುರಿತು ಹಝ್ರತ್ ಮಸೀಹ್ ಮೌಊದ್(ಅ) "ಸಿರ್ರುಲ್‌ಖಿಲಾಫ್"ದಲ್ಲಿ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ನಿಧನರಾದ ಸುದ್ದಿ ಮಕ್ಕ ಮತ್ತು ಅಲ್ಲಿಯ ಗವರ್ನರ್ ಆದ ಅತ್ತಾಬ್ ಬಿನ್ ಉಸೈದ್‌ರಿಗೆ ತಲುಪಿದಾಗ, ಅತ್ತಾಬ್ ಅಡಗಿ ಕುಳಿತರು. ಮಕ್ಕ ನಡುಗಿತು. ಮಕ್ಕಾ ನಿವಾಸಿಗಳು ಧರ್ಮತ್ಯಾಗಿಗಳಾಗುವ ಸಾಧ್ಯತೆಯಿತ್ತು.

ಇಂತಹ ಸ್ಥಿತಿಗಳಲ್ಲಿ, ಉಸಾಮರ ಸೈನ್ಯವನ್ನು ಕಳುಹಿಸುವುದರಿಂದ ಹಝ್ರತ್ ಅಬೂಬಕರ್(ರ)ರನ್ನು ತಡೆಯಬೇಕೆಂದು ಹಝ್ರತ್ ಉಮರ್(ರ)ರೊಡನೆ ಜನರು ವಿನಂತಿಸಿದರು. ಹಾಗೇನಾದರೂ ಸೈನ್ಯವನ್ನು ಕಳುಹಿಸಲೇ ಬೇಕು ಎಂದಾದರೆ, ಉಸಾಮರಿಗಿಂತ ಹಿರಿವಯಸ್ಸಿನ ಒಬ್ಬ ವ್ಯಕ್ತಿಯನ್ನು ನೇತಾರನನ್ನಾಗಿ ನಿಶ್ಚಯಿಸಬೇಕು ಎಂದು ಹೇಳಿದರು. ಹಝ್ರತ್ ಅಬೂಬಕರ್(ರ)ರೊಡನೆ ಹಝ್ರತ್ ಉಮರ್(ರ) ಈ ಮಾತನ್ನು ಹೇಳಿದಾಗ ಅವರು ಉಮರ್(ರ)ರ ಗಡ್ಡವನ್ನು ಹಿಡಿದುಕೊಂಡು ಹೇಳಿದರು: ಎಲೈ ಇಬ್ನು ಖಿತ್ತಾಬ್, ಹಝ್ರತ್ ಪೈಗಂಬರ್(ಸ) ನೇತಾರನನ್ನಾಗಿ ನಿಶ್ಚಯಿಸಿದ ವ್ಯಕ್ತಿಯನ್ನು ನೇತೃತ್ವ ಸ್ಥಾನದಿಂದ ನಾನು ವಜಾಗೊಳಿಸಬೇಕು ಎಂದು ನೀನು ಹೇಳುತ್ತಿರುವುದು ಎಷ್ಟು ದುಃಖಕರವಾದ ಸಂಗತಿಯಾಗಿದೆ!

ಆ ಸೈನ್ಯದ ಹೊರಡುವಿಕೆಯ ದೃಶ್ಯ ಕೂಡ ಬಹಳ ಆಶ್ಚರ್ಯಕರವಾಗಿತ್ತು. ಆ ಸಮಯದಲ್ಲಿ ಹಝ್ರತ್ ಉಸಾಮ ಸವಾರರಾಗಿದ್ದರು. ಹಝ್ರತ್ ಅಬೂಬಕರ್(ರ) ಕಾಲ್ನಡಿಗೆಯಾಗಿ ಬಂದು ಹಝ್ರತ್ ಉಸಾಮರೊಡನೆ ಹೇಳಿದರು: ನೀವು ಸರಿಯೆಂದು ಭಾವಿಸುವುದಾದರೆ ಹಝ್ರತ್ ಉಮರ್(ರ)ರನ್ನು ನನ್ನ ಕೆಲಸದಲ್ಲಿ ನೆರವಾಗಲು ಇಲ್ಲೇ ನಿಲ್ಲಿಸಲು ಅನುಮತಿ ನೀಡಿರಿ. ಹಝ್ರತ್ ಉಸಾಮ(ರ) ಅನುಮತಿ ಕೊಟ್ಟರು. ಅದರ ನಂತರ ಹಝ್ರತ್ ಉಮರ್(ರ) ಹಝ್ರತ್ ಉಸಾಮರನ್ನು ಭೇಟಿಯಾಗುವಾಗಲೆಲ್ಲ **"ಅಸ್ಸಲಾಮು ಅಲೈಕ ಅಯ್ಯುಹಲ್ ಅಮೀರ್"** ಎಂದು ಹೇಳುತ್ತಿದ್ದರು.

ಉಸಾಮರ ಸೈನ್ಯವನ್ನು ಕಳುಹಿಸುವಾಗ ಹಝ್ರತ್ ಅಬೂಬಕರ್(ರ) ಭಾಷಣ ಮಾಡುತ್ತಾ ಹೇಳಿದರು: ನಾನು ನಿಮಗೆ ಹತ್ತು ಸಂಗತಿಗಳ ಉಪದೇಶವನ್ನು ನೀಡುತ್ತೇನೆ. ನೀವು ಮೋಸಮಾಡಬಾರದು, ಯುದ್ಧ ಸಂಪತ್ತಿನಿಂದ ಕಳ್ಳತನ ಮಾಡಬಾರದು, ಪ್ರತಿಜ್ಞೆಯ ಉಲ್ಲಂಘನೆ ಮಾಡಬಾರದು, ಶವಶರೀರವನ್ನು ಕುರೂಪಗೊಳಿಸಬಾರದು, ಸಣ್ಣ ಮಕ್ಕಳು, ವೃದ್ಧರು ಮತ್ತು ಮಹಿಳೆಯರನ್ನು ಕೊಲ್ಲಬಾರದು, ಫಲದಾಯಕ ಮರಗಳನ್ನು ಕಡಿಯಬಾರದು, ಆಡುಗಳು, ದನಗಳು ಮತ್ತು ಒಂಟೆಗಳನ್ನು ಆಹಾರಕ್ಕಾಗಿಯಲ್ಲದೆ ಕೊಲ್ಲಬಾರದು, ಚರ್ಚಿನ ಪುರೋಹಿತರಿಗೆ ತೊಂದರೆ ಕೊಡಬಾರದು, ಯಾರಾದರೂ ನಿಮಗೆ ಏನಾದರೂ ತಿನ್ನಲಿಕ್ಕೆ ಕೊಟ್ಟರೆ, ಬಿಸ್ಮಿಲ್ಲಾಹ್ ಎಂದು ಹೇಳಿ ತಿನ್ನಬೇಕು, ಮಧ್ಯಭಾಗದಲ್ಲಿ ತಲೆಮುಂಡನ ಮಾಡಿಕೊಂಡು ತಲೆಯ ಸುತ್ತ ಹಣೆಪಟ್ಟಿಯಂತೆ ಕೂದಲನ್ನು ಇರಿಸುವ ಜನರನ್ನು ಬಿಡಬಾರದು. ಅವರು ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಹುರಿದುಂಬಿಸುವ ಮತ್ತು ಯುದ್ಧದಲ್ಲಿ ಭಾಗವಹಿಸುವ ಜನರಾಗಿರುವರು.

ಹಝ್ರತ್ ಉಸಾಮರೊಡನೆ ಹಝ್ರತ್ ಅಬೂಬಕರ್(ರ), ಹಝ್ರತ್ ಪೈಗಂಬರ್(ಸ) ಮಾಡಲು ಹೇಳಿದ್ದ ಎಲ್ಲವನ್ನು ನೀವು ಖಂಡಿತ ಮಾಡಬೇಕು ಎಂದು ಹೇಳಿದರು. ಈ ಸೈನ್ಯವು ರಬೀಉಲ್ ಅವ್ವಲಿನ ಕೊನೆಯಲ್ಲಿ ಹೊರಟಿತು. 20 ರಾತ್ರಿಗಳ ಯಾತ್ರೆಯ ನಂತರ ಉಬ್ನಾ ನಿವಾಸಿಗಳ ಮೇಲೆ ಅಚಾನಕ್ಕಾದ ದಾಳಿ ನಡೆಸಿ ಅವರು ಹಿಂದೆ ಮಾಡಿದ ದೌರ್ಜನ್ಯಗಳಿಗೆ ಪ್ರತೀಕಾರ ಪಡೆಯುವುದರಲ್ಲಿ ಯಶಸ್ಸು ಗಳಿಸಿತು. ಬಹಳಷ್ಟು ಯುದ್ಧ ಸಂಪತ್ತನ್ನು ಗಳಿಸಿ ಹಝ್ರತ್ ಉಸಾಮ(ರ) ಮದೀನಕ್ಕೆ ಮರಳಿ ಬಂದರು. ಆಗ ಹಝ್ರತ್ ಅಬೂಬಕರ್(ರ) ಮುಹಾಜಿರರು ಮತ್ತು ಮದೀನಾ ನಿವಾಸಿಗಳ ಜೊತೆಗೆ ಉಸಾಮರನ್ನು ಭೇಟಿಯಾಗಲು ಹೊರಗೆ ಬಂದರು.

ಉಸಾಮರ ಸೈನ್ಯದ ರವಾನೆಯಿಂದ ಅನೇಕ ದೀರ್ಘಕಾಲೀನ ಪರಿಣಾಮಗಳು ಪ್ರಕಟವಾದುವು. ಖಲೀಫರ ತೀರ್ಮಾನ ಎಷ್ಟು ಸಮಯೋಚಿತ ಮತ್ತು ಪ್ರಯೋಜನಕರವಾಗಿತ್ತು ಎಂದು ಎಲ್ಲ ಜನರಿಗೆ ಮನವರಿಕೆಯಾಯಿತು. ಹಝ್ರತ್ ಅಬೂಬಕರ್(ರ) ಬಹಳ ಸೂಕ್ಷ್ಮದೃಷ್ಟಿಯುಳ್ಳವರೂ ತೀಕ್ಷ್ಣಬುದ್ಧಿಯುಳ್ಳವರೂ ಆಗಿರುವರು ಎಂದು ಜನರು ಅರಿತುಕೊಂಡರು. ಅರೇಬಿಯದ ಗೋತ್ರಗಳಲ್ಲಿ ಮುಸ್ಲಿಮರ ಬಗ್ಗೆ ಭೀತಿ ಉಂಟಾಯಿತು. ಅರೇಬಿಯದ ಗಡಿಗಳ ಮೇಲೆ ಕಣ್ಣಿರಿಸಿದ್ದ ಅನ್ಯದೇಶಿಯರೊಳಗೆ ಮುಸ್ಲಿಮರ ಕುರಿತು ಭಯ ಹುಟ್ಟಿತು.

ಬ್ರಿಟನಿನ ಪ್ರಸಿದ್ಧ ಓರಿಯಂಟಲಿಸ್ಟ್ ಸರ್ ಥಾಮಸ್ ವಾಕರ್ ಅರ್ನಾಲ್ಡ್ ಬರೆಯುತ್ತಾರೆ: ಸಿರಿಯ, ಇರಾನ್ ಮತ್ತು ಉತ್ತರ ಆಫ್ರಿಕವನ್ನು ವಶಪಡಿಸಲು, ಪ್ರಾಚೀನ ಇರಾನಿನ ಆಡಳಿತವನ್ನು ಕೊನೆಗೊಳಿಸಲು ಮತ್ತು ರೋಮನರ ಆಡಳಿತದ ಹಿಡಿತದಿಂದ ಅದರ ಅತ್ಯುತ್ತಮ ರಾಜ್ಯಗಳನ್ನು ಸ್ವತಂತ್ರಗೊಳಿಸಲು ಮುಸ್ಲಿಮರು ಮಾಡಿದ ವೈಭವಶಾಲಿ ಯುದ್ಧಗಳಲ್ಲಿ ಇದು ಮೊದಲ ಯುದ್ಧವಾಗಿತ್ತು.

ಹಝ್ರತ್ ಅಬೂಬಕರ್(ರ)ರಿಗೆ ಎದುರಿಸಬೇಕಾಗಿ ಬಂದ ಮತ್ತೊಂದು ಕಷ್ಟತೆ ಝಕಾತ್ ನೀಡುವುದನ್ನು ನಿರಾಕರಿಸಿದವರ ಪಿತೂರಿ. ಧರ್ಮತ್ಯಾಗದ ಅನೇಕ ರೂಪಗಳಲ್ಲಿ ಇದು ಸಹ ಒಂದು ರೂಪವಾಗಿತ್ತು. ಎಂದರೆ, ಈ ಜನರು ಇಸ್ಲಾಂ ಧರ್ಮದಲ್ಲಿ ನೆಲೆನಿಂತಿದ್ದರು. ಆದರೆ ಝಕಾತ್ ನೀಡುವುದು ಕಡ್ಡಾಯವೆಂಬುದನ್ನು ಮತ್ತು ಅದನ್ನು ಖಲೀಫರಿಗೆ ಕೊಡುವುದರ ಆವಶ್ಯಕತೆಯನ್ನು

ನಿರಾಕರಿಸಿದರು. ಶ್ರೇಷ್ಠ ಸಹಾಬಿಯರೊಂದಿಗೆ ಸಲಹೆ ಪಡೆದ ನಂತರ ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನಾಣೆ, ಝಕಾತ್ ನೀಡುವುದನ್ನು ನಿರಾಕರಿಸುವವರು ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ನೀಡುತ್ತಿದ್ದ ಹಾಗೆ ಈಗ ಒಂದು ಹಗ್ಗ ನೀಡುವುದನ್ನು ನಿರಾಕರಿಸಿದರೂ ನಾನು ಅವರೊಂದಿಗೆ ಯುದ್ಧ ಮಾಡುವೆನು.

(ಝಕಾತ್ ನೀಡುವುದನ್ನು ನಿರಾಕರಿಸಿದವರ ವರ್ತನೆಗಳು, ಅವರ ವಿರುದ್ಧ ಯುದ್ಧ ಮತ್ತು ಅದರ ಪರಿಣಾಮಗಳ ಬಗ್ಗೆ ಮುಂದಿನ ಬಾರಿ ಪ್ರಸ್ತಾಪಿಸುವೆನು ಎಂದು ಹೇಳಿದ ನಂತರ ಹುಝೂರ್ ಹೇಳಿದರು:) ಇಂದು ನಾನು ಪುನಃ ಲೋಕದ ಈಗಿನ ಸ್ಥಿತಿಗತಿಗಳ ಬಗ್ಗೆ ದುಆ ಮಾಡಬೇಕೆಂದು ಹೇಳಬಯಸುತ್ತೇನೆ. ಎರಡೂ ಕಡೆಯ ಆಡಳಿತಗಳಿಗೆ ಅಲ್ಲಾಹನು ಬುದ್ಧಿ ನೀಡಲಿ. ಮನುಷ್ಯ ಹತ್ಯೆಯಿಂದ ಈ ಜನರು ದೂರ ಸರಿಯುವಂತಾಗಲಿ. ಈ ಯುದ್ಧದಲ್ಲಿ ಅವರೆಲ್ಲರೂ ಒಟ್ಟಾಗಿ ಇರುವುದನ್ನು ನೋಡಿಕೊಂಡು ಮುಸ್ಲಿಮರು ಕೂಡ ಪಾಠ ಕಲಿಯಬೇಕು. ಆದರೆ ಮುಸ್ಲಿಮರು ಒಂದೇ ಕಲಿಮ ಹೇಳುವವರಾಗಿ ಕೂಡ ಎಂದಿಗೂ ಒಂದಾಗುವುದಿಲ್ಲ. ಒಂದಾಗುವುದಕ್ಕೆ ಬದಲಾಗಿ ಒಂದು ದೇಶವನ್ನೇ ನಾಶಮಾಡುತ್ತಾರೆ. ಅವರು ಇರಾಕನ್ನು ನಾಶಮಾಡಿಸಿದರು, ಸಿರಿಯವನ್ನು ನಾಶಮಾಡಿಸಿದರು, ಯಮನಿನಲ್ಲಿ ನಾಶನಷ್ಟಗಳು ಆಗುತ್ತಿವೆ, ಅನ್ಯರಿಂದ ನಾಶಮಾಡಿಸುತ್ತಾರೆ ಮತ್ತು ಸ್ವತಃ ಕೂಡ ನಾಶ ಮಾಡುತ್ತಾರೆ. ಕನಿಷ್ಠ ಪಕ್ಷ ಒಗ್ಗಟಿನಿಂದ ಇರುವ ಪಾಠವನ್ನಾದರೂ ಮುಸ್ಲಿಮರು ಅವರಿಂದ ಕಲಿಯಲಿ. ಅಲ್ಲಾಹನು ಮುಸ್ಲಿಂ ಸಮುದಾಯದ ಮೇಲೂ ಕರುಣೆದೋರಲಿ, ಮುಸ್ಲಿಮರ ಮೇಲೂ ಕರುಣೆದೋರಲಿ. ಮುಸ್ಲಿಂ ಉಮ್ಮತ್ತಿನ ಮೇಲೆ ಅಲ್ಲಾಹನು ಕರುಣೆದೋರಲಿ. ಈ ಜನರು ಕಾಲಘಟ್ಟದ ಇಮಾಮರನ್ನು ನಂಬುವವರಾದರೆ ಮಾತ್ರ ಅದು ಸಾಧ್ಯ. ಅದೇ ಉದ್ದೇಶಕ್ಕಾಗಿ ಅಲ್ಲಾಹನು ಅವರನ್ನು ಈ ಕಾಲಘಟ್ಟದಲ್ಲಿ ಕಳುಹಿಸಿದ್ದಾನೆ. ಅಲ್ಲಾಹನು ಅವರಿಗೆ ಬುದ್ಧಿ ಮತ್ತು ವಿವೇಕ ನೀಡಲಿ. ಮುಸ್ಲಿಮರು ತಮ್ಮ ಸ್ಥಿತಿಗಳನ್ನು ಸರಿಪಡಿಸುವವರಾಗಲು ದುಆ ಮಾಡುವುದರೊಂದಿಗೆ, ಲೋಕಕ್ಕಾಗಿಯೂ ದುಆ ಮಾಡಿರಿ. ಮುಸ್ಲಿಮರು ಸ್ವತಃ ಯುದ್ಧಗಳಲ್ಲಿ ಭಾಗಿಯಾಗುವ ಬದಲಾಗಿ ತಮ್ಮ ಮಾಧ್ಯಮ ಮತ್ತು ಮಾರ್ಗೋಪಾಯಗಳನ್ನು ಉಪಯೋಗಿಸಿ ಲೋಕವನ್ನು ಯುದ್ಧಗಳಿಂದ ತಡೆಯುವವರಾಗಲಿ.

(ಖುತ್ಬದ ಕೊನೆಯಲ್ಲಿ ಲಾಹೋರಿನ ಝಫರ್ ಇಖ್ಬಾಲ್ ಹಾಶಿಮಿ ಸಾಹಿಬ್‌ರ ಪತ್ನಿಯಾದ ಸಯ್ಯದ ಖೈಸರ ಝಫರ್ ಹಾಶಿಮಿ ಸಾಹಿಬ ಅವರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝ ನಮಾಝ್ ಕೂಡ ನಿರ್ವಹಿಸುವುದಾಗಿ ಹುಝೂರ್ ಹೇಳಿದರು.) ದಿವಂಗತರು ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯಾದ ಹಝ್ರತ್ ಸಯ್ಯದ್ ಮುಹಮ್ಮದ್ ಅಲಿ ಬುಖಾರಿ ಸಾಹಿಬ್‌ರ ಮೊಮ್ಮಗಳಾಗಿದ್ದರು. ದಿವಂಗತರು ಜಮಾಅತಿನ ಸೇವೆ ಸಲ್ಲಿಸುವ, ಉಪವಾಸ, ನಮಾಝ್ ನಿರ್ವಹಿಸುವ, ದುಆ ಮಾಡುವ, ಅತಿಥಿ ಸತ್ಕಾರ ಮಾಡುವ, ಸಹನೆದೋರುವ, ವಂದಿಸುವ ಮಹಿಳೆಯಾಗಿದ್ದರು. ದಿವಂಗತರು ಪತಿಯನ್ನಲ್ಲದೇ ಐವರು ಪುತ್ರರನ್ನು ಮತ್ತು ಒಬ್ಬಳು ಪುತ್ರಿಯನ್ನು ಅಗಲಿರುವರು. ಒಬ್ಬ ಮಗನಾದ ಮಹ್ಮೂದ್ ಇಖ್ಬಾಲ್ ಹಾಶಿಮಿ ಸಾಹಿಬ್ ಅಲ್ಲಾಹನ ಮಾರ್ಗದಲ್ಲಿ ಲಾಹೋರಿನ ಕ್ಯಾಂಪ್ ಜೈಲಿನಲ್ಲಿ ಸೆರೆಯಾಳು ಆಗಿರುವರು. ಅವರಿಗೆ ಸೆರೆಮನೆಯಿಂದ ಹೊರಗೆ ಬರಲು ಅನುಮತಿ ಸಿಕ್ಕಿರಲಿಲ್ಲವಾದರೂ ತಾಯಿಯ ಮಯ್ಯತ್ತನ್ನು ಜೈಲಿಗೆ ತರಿಸಿ ಕೊನೆಯ ನೋಟ ಬೀರುವ ಅನುಮತಿಯನ್ನು ಹೇಗಿದ್ದರೂ ಆಡಳಿತ ಕೊಟ್ಟಿತು. ಅಲ್ಲಾಹನು ಬೇಗನೇ ಅವರ ಬಿಡುಗಡೆಯ ಮಾರ್ಗವನ್ನು ತೆರೆಯಲಿ – ಆಮೀನ್. ದಿವಂಗತರ ಒಬ್ಬ ಮೊಮ್ಮಗನಾದ ಹಾಶಿಂ ಇಖ್ಬಾಲ್ ಸಾಹಿಬ್ ಯು.ಕೆ.ಯಲ್ಲಿ ಮುಬಲ್ಲಿಗ್ ಆಗಿರುವರು. (ಹುಝೂರ್ ಅವರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَاءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 11-03-2022*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon